ಪಟ್ಟಿಯನ್ನು ಪ್ರಕಟ ಮಾಡಿದ್ದಾರೆ. ಅಂಗವಿಕಲರು ಅರ್ಹರಲ್ಲ ಅಂತ ಈಗ ಹೇಳುವುದಾದರೆ, ಮೊದಲು ನೋಟಿಫೈ ಮಾಡುವಾಗ ಏಕೆ ಹೇಳಲಿಲ್ಲ. ಆ ರೀತಿ ಹೇಳಿದ್ದಿದ್ದರೆ ಇವರ್ಯಾರು ಅರ್ಜಿಯನ್ನೇ ಹಾಕುತ್ತಿರಲಿಲ್ಲ. ರೈತರ ಚಳುವಳಿಯಾದಂತಹ ದಿವಸದ ಹಿಂದೆ ಮುಂದೆ ಸಂದರ್ಶನ ವಾಯಿತು. ಅವರು ವಾಪಸ್ಸು ಊರಿಗೆ ಹೋಗುವುದಕ್ಕೆ ಪಟ್ಟಂತಹ ಪಾಡು ಹೇಳತೀರದು. ಇಂತಹ ಒಂದು ಬೇಜಾವ್ದಾರಿಯುತ ಕೆಲಸ ಸರ್ಕಾರದಿಂದ ನಡೆದಿದೆ. ಇದನ್ನು ತಮ್ಮ ಮೂಲಕ ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಎಸ್. ರೇವಣ್ಣ.—ಆದು ವ್ಯವಸಾಯ ಸಹಾಯಕ ಅಧಿಕಾರಿಗಳ ಹುದ್ದೆಯಲ್ಲಿ ಗ್ರಾಮ ಸೇವಕರಿಗೆ ಕರೆದಂತಹ ಸಂದರ್ಶನ ಆದು. ಗ್ರಾಮ ಸೇವಕರು ಅಂದರೆ ಆದು ಎಕ್ಸಿಕ್ಯೂಟೀವ್ ಜಾಬ್, ಹೊಲಗಳಿಗೆ ಹೋಗಿ ಕೆಲಸ ಮಾಡಬೇಕಾಗುತ್ತದೆ. ಸರಿಯಾಗಿ ತಿರುಗಾಡುವುದಕ್ಕೂ ಶಕ್ತಿ ಇಲ್ಲದಂತಹವರು ಆ ದಿವಸ ಸಂದರ್ಶನಕ್ಕೆ ಬಂದಿದ್ದರು. ಆ ಒಂದು ಕಾರಣದಿಂದ ಇವರನ್ನು ಆಯ್ಕೆ ಮಾಡಿಲ್ಲವೆಂದು ನನಗೆ ಬಂದಿರುವ ಪರ್ತಪಾನ.

(v) ಶಿವಮೊಗ್ಗ ಮುನಿಸಿಪಾಲಿಟಿಯವರು ಕಾಲೇಜಿಗೆ ಕಟ್ಟಡವನ್ನು ಕಟ್ಟುವುದ ಕ್ಕೋಸ್ಕರವಾಗಿ ಜಾಗವನ್ನು ಕಾಯ್ದಿರಿಸಿರುವ ಬಗ್ಗೆ

ಶ್ರೀ ಎಂ. ಆನಂದರಾವ್.—ನನ್ನ ಪಕ್ಕದ ಕ್ಷೇತ್ರವಾದ ಭದ್ರಾವತಿಯ ಪ್ರತಿನಿಧಿಯಾದಂತಹ ಶ್ರೀಮಾನ್ ಸಾಲೇರ್ ಸಿದ್ದಪ್ಪನವರ ಕ್ಷಮೆ ಕೋರಿ ಅವರ ಕ್ಷೇತ್ರಕ್ಕೆ ಸಂಬಂಧಪಟ್ಟ ವಿಚಾರವೊಂದು ತಮ್ಮ ಮೂಲಕ ಸರ್ಕಾರದ ಗಮನಕ್ಕೂ ಹಾಗೂ ಅವರ ಗಮನಕ್ಕೂ ತರಲಿಚ್ಚಿಸುತ್ತೇನೆ.

೧೦–೩೦ ಎ. ಎಂ.

ಭದ್ರಾವತಿ ನಿಯಂತ್ರಿತ ಮಾರುಕಟ್ಟೆಯು ನಿರ್ಮಾಣಕ್ಕೆ ಸರ್ವೆ ನಂ. ೫೩ರಲ್ಲಿ ೧೨ ಎಕರೆ ಜಮೀನನ್ನು ಪಡೆಯಲಾಗಿತ್ತು. ನಂತರ ಆ ಸ್ಥಳ ಕಟ್ಟಡಕ್ಕೆ ಯೋಗ್ಯವಲ್ಲವೆಂದು ಬೇರೆ ಜಮೀನನ್ನು ಪಡೆಯಲಾಗಿದೆ. ಆ ೧೨ ಎಕರೆ ಜಾಗವನ್ನು ಕಾಲೇಜು ಕಟ್ಟಲು ಕಾಯ್ದಿಡಲಾಗಿದೆ. ಆದರೆ ಅದನ್ನು ಬೇರೆ ಉದ್ದೇಶಕ್ಕೆ ಅಂದರೆ ನಿವೇಶನ ಮಾಡುವ ಹವಣಿಕೆಯಲ್ಲಿರುವುದರಿಂದ ಈ ಬಗ್ಗೆ ವಿದ್ಯಾರ್ಥಿಗಳು ವಿರೋಧ ಮಾಡುತ್ತಿರುವ ಕಾರಣ ಸರ್ಕಾರ ಸದರಿ ಜಾಗವನ್ನು ಕಾಲೇಜು ನಿರ್ಮಾಣಕ್ಕೆ ಮೀಸಲಿಡ ಬೇಕೆಂದು ಒತ್ತಾಯಿಸುತ್ತೇನೆ ಮತ್ತು ಸಾಲೂರು ಸಿದ್ದಪ್ಪನವರು ಇದಕ್ಕೆ ಬೆಂಬಲ ನೀಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಆರ್. ಎಲ್. ಜಾಲಪ್ಪ (ಮಾನ್ಯ ಸಹಕಾರ ಸಚಿವರು).—ಸದಸ್ಯರು ಹೇಳಿದ ಹಾಗೆ, ಭದ್ರಾವತಿಯಲ್ಲಿ ಎ.ಪಿ.ಎಂ.ಸಿ.ಯವರು ೫ ಎಕರೆ ೩೦ ಗುಂಟೆ ಜಾಗವನ್ನು ೧೯೭೪–೭೫ರಲ್ಲಿ ಖಾಸಗಿ ಯವರಿಂದ ಕೊಂಡುಕೊಂಡಿದ್ದರು. ಅದು ಮಾರುಕಟ್ಟೆ ಕಟ್ಟಲು ಸಾಕಾಗುವುದಿಲ್ಲವೆಂದು ಹೊರಗಡೆ ೨೩ ಎಕರೆ ಜಾಗವನ್ನು ತೆಗೆದುಕೊಂಡಿದ್ದಾರೆ. ಆದರೆ ಎ.ಪಿ.ಎಂ.ಸಿ. ಯ ಹಣಕಾಸಿನ ಪರಿಸ್ಥಿತಿ ಚೆನ್ನಾಗಿಲ್ಲದಿರುವುದರಿಂದ ಕಟ್ಟಡ ಕಟ್ಟುವುದಕ್ಕೆ ಆಗಿಲ್ಲ. ಅವರಿಗೆ ಅಗತ್ಯವಾಗಿ ಹಣ ಬೇಕಾಗಿದೆ. ಮುನಿಸಿಪಾಲಿಟಿಯವರು ಒಂದು ರೆಸಲ್ಯೂಷನ್ ಪಾಸ್ ಮಾಡಿ ನನ್ನನ್ನು ನೋಡಿದರು. ಅವರು ಆದರಲ್ಲಿ ಏನು ಹೇಳಿದ್ದಾರೆಂದರೆ, ನಮಗೆ ಆ ಜಾಗವನ್ನು ಕೊಡಿ, ಆವರು ೧೯೭೪–೭೫ರಲ್ಲಿ ಏನು ಹಣ ಕೊಟ್ಟು ಕೊಂಡುಕೊಡಿದ್ದಾರೆ ಆ ಹಣವನ್ನು ಕಂತಿನಲ್ಲಿ ಕೊಡುತ್ತೇವೆಂದು. ಅದನ್ನು ಕೊಡುವುದಕ್ಕೆ ಸಾಧ್ಯವಿಲ್ಲ. ಎ.ಪಿ.ಎಂ.ಸಿ.ಯವರ ಹಣಕಾಸಿನ ಪರಿಸ್ಥಿತಿ ಚೆನ್ನಾಗಿಲ್ಲದೆ ಇರುವುದರಿಂದ ಅವರು ಆದಕ್ಕೆ ಒಪ್ಪುತ್ತಿಲ್ಲ. ಮಾರುಕಟ್ಟೆಯ ದರವನ್ನು ಕೊಟ್ಟರೆ ಬಿಟ್ಟು ಕೊಡುವುದಕ್ಕೆ ತಯಾರಿದ್ದಾರೆ.

ಅಧ್ಯಕ್ಷರು.—ಶ್ರೀ ಸ್ವಾಮಿರಾವ್ ಅವರು ಏನು ಒಂದು ನೋಟೀಸ್ ಕೊಟ್ಟಿದ್ದಾರೆ ಅದರಲ್ಲಿ ವೈಸ್ ಚಾನ್ಸ್‌ಲರ್ ವಿಚಾರವನ್ನು ಎತ್ತಿದ್ದಾರೆ. ಛ್ಯಾನ್ಸಲರ್ ಗವರ್ನರ್ರೇ ಆಗಿರುವುದರಿಂದ ಅದನ್ನು ಇಲ್ಲಿ ಚರ್ಚೆ ಮಾಡುವುದು ಬೇಡವೆಂದು ಸದಸ್ಯರಲ್ಲಿ ವಿನಂತಿಸಿಕೊಳ್ಳುತ್ತೇನೆ.

ಶ್ರೀ ಎಂ. ಸ್ವಾಮಿರಾವ್.—ನಾವು ಏನು ಮಾಡಬೇಕೆಂದು ಗೊತ್ತಾಗುತ್ತಿಲ್ಲ.

ಅಧ್ಯಕ್ಷರು.—ಅದು ಇಂಡಿವಿಜಿಯುಲ್ ಹೆರಾಸ್‌ಮೆಂಟ್. ಅದರ ಬಗ್ಗೆ ಪೋಲೀಸರು ಕ್ರಮ ತೆಗೆದುಕೊಂಡು ಅರೆಸ್ಟ್ ಮಾಡಿದ್ದಾರೆ. ಆದ್ದರಿಂದ ಇದರ ಬಗ್ಗೆ ಒಂದು ಪ್ರಶ್ನೆ ಕಳುಹಿಸಿ. ನೀವು ಈಗ ಕೇಳುತ್ತಿರುವುದು ರೂಲ್ ೫೩ರ ದುರುಪಯೋಗಕ್ಕೆ ನಿದರ್ಶನವಾಗಿದೆ. ನಿಮಗೆ ಏನಾದರೂ ಹೇಳಿದರೆ ಗಲಾಟೆ ಮಾಡಲು ಪ್ರಾರಂಭಿಸುತ್ತೀರಿ.

ಶ್ರೀ ಎಂ. ರಾಮಪ್ಪ.—ನಮಗೆ ಇಲ್ಲಿ ಕೂರುವುದಕ್ಕೆ ಅಪಮಾನವಾಗುತ್ತಿದೆ ಆದ್ದರಿಂದ ನಾವು ಹೊರಗೆ ಹೋಗಿ ಬರುತ್ತೇವೆ.

(ಶ್ರೀ ರಾಮಪ್ಪನವರು ಸಭಾತ್ಯಾಗ ಮಾಡಿದರು)

ಶ್ರೀ ಗೋಪಾಲ ಮುಕುಂದ ಕಾನಡೆ.—ಕ್ರಾಂತಿ ರಂಗದವರು ಬರಬಾರದೆಂದು ಬೋರ್ಡ್ ಸಾಕಿ. ನಾವು ಬಂದ ತಕ್ಷಣ ಗಲಾಟೆ ಆಗುತ್ತದೆ ಅನ್ನುತ್ತೀರಿ.

ಅಧ್ಯಕ್ಷರು.—ಆ ರೀತಿ ಲಘುವಾಗಿ ಮಾತನಾಡಬಾರದು.

ಶ್ರೀ ಗೋಪಾಲ ಮುಕುಂದ ಕಾನಡೆ.—ನಾವು ಎದ್ದ ತಕ್ಷಣ ಆ ರೀತಿಯಾಗಿ ಹೇಳುತ್ತೀರಿ. ಬೇರೆಯವರಿಗಾದರೆ ಸುಮ್ಮನೆ ಇರುತ್ತೀರಿ.

ಅಧ್ಯಕ್ಷರು.—ನಿಮ್ಮ ತಿಳುವಳಿಕೆ ಹಾಗೆ ಆಗಿದೆ.

ಶ್ರೀ ಗೋಪಾಲ ಮುಕುಂದ ಕಾನಡೆ.—ನೀವು ಮಾಡತಕ್ಕ ನಡವಳಿಕೆ ಹಾಗೆ ಇದೆ.

ಅಧ್ಯಕ್ಷರು.—ವಿಷಯ ಇರತಕ್ಕದನ್ನು ಸಭೆಯ ಗಮನಕ್ಕೆ ತರತಕ್ಕದ್ದು ನನ್ನ ಕರ್ತವ್ಯ. ಅದನ್ನು ತಿಳಿದುಕೊಳ್ಳದಿದ್ದರೆ ಸಭೆ ನಡೆಸುವುದು ಕಷ್ಟ. ದಯಮಾಡಿ ಕುಳಿತುಕೊಳ್ಳಿ.

ಶ್ರೀ ಗೋಪಾಲ ಮುಕುಂದ ಕಾನಡೆ.—ಅವರಿಗೂ ಸ್ವಲ್ಪ ಹೇಳಿಬಿಡಿ.

ಅಧ್ಯಕ್ಷರು.—ಎಲ್ಲರಿಗೂ ಹೇಳುತ್ತೇನೆ. ಡಾ।। ತಿಮ್ಮೇಗೌಡರಿಗೂ ಹೇಳಿದ್ದೇನೆ. ಅವರ ವ್ಯಕ್ತವ್ಯ ಡಿಸ್ ಆಲೋ ಮಾಡಿದ್ದೇನೆ, ಶ್ರೀ ರಾಮದೇವ್ ಅವರದ್ದನ್ನೂ ಡಿಸ್‌ಆಲೋ ಮಾಡಿದ್ದೇನೆ. ಆದರೆ ನಿಮಗೆ ಮಾತ್ರ ಏಕೆ ಕೋಪ ಬರುತ್ತದೋ ಗೊತ್ತಿಲ್ಲ. ನಿಮಗೂ ಅವರಿಗೂ ಇರತಕ್ಕ ಬಾಂಧವ್ಯಕ್ಕೆ ನಾನು ಹೊಣೆಯೇ ?

(vi) ತೀರ್ಥಹಳ್ಳಿ ತಾಲ್ಲೂಕಿನ ಹರಿಕಥೆ ಗೋಪಾಲ ನಾಯಕರಿಗೆ ಪೋಲೀಸಿನವರು ತೊಂದರೆ ಕೊಟ್ಟಿರುವ ಬಗ್ಗೆ

ಶ್ರೀ ಬಿ. ಸ್ವಾಮಿರಾವ್.—ತೀರ್ಥಹಳ್ಳಿ ತಾಲ್ಲೂಕಿನ ಹರಿಕಥೆ ಗೋಪಾಲ ನಾಯಕರು ಎಂದರೆ ಡಾ।। ಹಾ. ಮು. ನಾಯಕರ ಸಹೋದರ, ಮತ್ತು ಬಿ.ಎಸ್. ವಿಶ್ವನಾಥನ್ ಅವರ ಸಂಬಂಧಿ. ಅವರ ಮನೆಗೆ ಕಳೆದ ಒಂದನೇ ತಾರೀಖು ರಾತ್ರಿ ೧೦ ಗಂಟೆಗೆ ಪೋಲೀಸ್ ಸಬ್ ಇನ್ಸ್‌ಪೆಕ್ಟರ್ ಗುಂಡಪ್ಪ ಮತ್ತು ಎರಡು ಜನ ಪೇದೆಗಳು ಹೋಗಿ ಲೂಟಿ ಮಾಡಿ, ಬೂಟು ಕಾಲಿನಿಂದ ಒದ್ದು, ದೇವರ ಕೋಣೆಯಲ್ಲೆಲ್ಲ ಹೋಗಿ ಒದ್ದು ಹೊತ್ತುಕೊಂಡು ಬರಬೇಕಾದರೆ ಅವರ ಹೆಂಡತಿಗೆ ಪ್ರಜ್ಞೆ ಹೋಗಿದೆ ಅಣ್ಣನಿಗೆ ಪ್ರಜ್ಞೆ ಹೋಗಿದೆ, ಚಿಕ್ಕ ಮಗು ಕಿರುಚಿಕೊಂಡಿದೆ ಮತ್ತು ಅವರ ಪ್ರಜ್ಞೆ ಹೋಗಿದೆ. ಅವರನ್ನು ಅಲ್ಲಿಂದ ಬಿಡದಿ ಪೋಲೀಸ್ ಠಾಣೆಗೆ ಕರೆದು ತಂದು ಹಿಂಸೆ ಕೊಟ್ಟಿದ್ದಾರೆ. ಮೇಲಾಗಿ ತೀರ್ಥಹಳ್ಳಿಯ ಪ್ರಮುಖ ಪಾಜಿ ಶಾಸಕರು ಹಾಗೂ ಪುರಸಭೆಯ ಅಧ್ಯಕ್ಷರಾಗಿರುವ ರವೀಂದ್ರ ಅವರು ಈ ಬಗ್ಗೆ ಸರ್ಕಾರಕ್ಕೆ ಒಂದು ಕರೆ ಕೊಟ್ಟಿದ್ದಾರೆ. ಈ ಒಂದು ಕೇಸನ್ನು ೨-೩ ದಿನದೊಳಗೆ ಸರ್ಕಾರ ಇತ್ಯರ್ಥ ಮಾಡದಿದ್ದರೆ ಪರಿಸ್ಥಿತಿ ವಿಕೋಪಕ್ಕೆ ಹೋಗುತ್ತದೆಂದು ಕೇಳಿದ್ದಾರೆ. ಇವತ್ತಿನ ದಿವಸ ಪೋಲೀಸರ ದೌರ್ಜನ್ಯ ಜಾಸ್ತಿಯಾಗಿದೆ. ಇದರ ಬಗ್ಗೆ ನಾನು ಸರ್ಕಾರದ ಗಮನ ಸೆಳೆಯುತ್ತಿದ್ದೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು).—ಅವರು ಏನು ವಿವರಣೆ ಕೊಟ್ಟಿದ್ದಾರೆ ಅದರ ಬಗ್ಗೆ ನಾನು ಅಲ್ಲಿಂದ ವರದಿ ತರಿಸಿ ವಿಷಯ ಏನಾಗಿದೆ ಎಂಬುದನ್ನು ತಿಳಿದುಕೊಂಡು ನಂತರ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು.—ಅದು ನನ್ನ ಕ್ಷೇತ್ರವಾದರೂ ನನಗೇ ವಿಷಯ ಗೊತ್ತಿರಲಿಲ್ಲ. ದಯಮಾಡಿ ಅದನ್ನು ಸರ್ಕಾರಕ್ಕೆ ಕಳುಹಿಸಿಕೊಡಿ.

ಶ್ರೀ ಎ. ಲಕ್ಷ್ಮೀಸಾಗರ್.—ವೈಯಕ್ತಿಕ ಸಮಸ್ಯೆಗಳನ್ನೆಲ್ಲ ಸಭೆಯ ಮುಂದೆ ತಂದರೆ ಸಭೆಯಲ್ಲಿ ಗಹನವಾದ ವಿಚಾರಗಳನ್ನು ಚರ್ಚಿಸುವುದಕ್ಕೆ ಸಮಯ ಸಿಗುವುದಿಲ್ಲವೆಂದು ತಮ್ಮ ಪಾದಪದ್ಮವನ್ನು ಪುಷ್ಟೀಕರಿಸಿ ಹೇಳುತ್ತೇನೆ.